**<u>ದಿನಾಂಕಃ04-03-2023 ರಂದು ಪ್ರಮಾಣ ವಚನ ಮಾಡಿಸಲಾಯಿತು.</u>**

**<u>ಪಾಟೀ ಸವಾಲುಃ ನೇ ಆರೋಪಿ ಪರಃ ಜೆಕೆಎಸ್. ವಕೀಲರಿಂದಃ</u>**

ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು 11-12 ವರ್ಷಗಳಿಂದ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಉದ್ಯೋಗಕ್ಕೆ ಸೇರುವಾಗ ನಾನು ನನ್ನ ಶಾಲೆಯ ದಾಖಲಾತಿಗಳನ್ನು ಕೊಟ್ಟಿದ್ದೆ. SSLC ಅಂಕಪಟ್ಟಿಯನ್ನು ಸಹಾ ಕೊಟ್ಟಿದ್ದೆ ಎಂದರೆ ಸರಿ. ನಾನು ಕೆಲಸಕ್ಕೆ ಸೇರುವ ಮೊದಲು ನನ್ನ ತಂದೆಯ ಮನೆ ಕೆನರಾ ಬ್ಯಾಂಕ್ ರಸ್ತೆಯಲ್ಲಿತ್ತು ಎಂದರೆ ಸರಿಯಲ್ಲ, ರಾಂಪುರದಲ್ಲಿ ಇತ್ತು. ರಾಂಪುರದಲ್ಲಿ ನಮ್ಮ ತಂದೆ ಬಾಡಿಗೆ ಮನೆಯಲ್ಲಿ ಇದ್ದರು. ಸುಮಾರು 10 ವರ್ಷಗಳ ಕಾಲ ನಾನು ರಾಂಪುರದಲ್ಲಿ ಇದ್ದೆ. ನಮ್ಮ ಮನೆಯಲ್ಲಿ ಬಾಂಬೆ ಆಂಟಿ ಇದ್ದರು. ನಮ್ಮ ತಂದೆ ತಾಯಿ ತೀರಿಕೊಂಡು ಸುಮಾರು 35 ವರ್ಷಗಳಾಗಿರುತ್ತವೆ. ಈಗ ನನಗೆ 50 ವರ್ಷ ವಯಸ್ಸಾಗಿರುತ್ತದೆ. ರಾಂಪುರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆವು, ಆ ಬಗ್ಗೆ ಅಗ್ರಿಮೆಂಟ್ ಇರುವುದಿಲ್ಲ. ರಾಂಪುರದಲ್ಲಿ ನಾನು ವಾಸವಿದ್ದ ಮನೆಯ ಸಂಖ್ಯೆಯನ್ನು ಹೇಳಲಿಕ್ಕಾಗುವುದಿಲ್ಲ. ನಾನು ರಾಂಪುರದಲ್ಲಿ ವಾಸವಾಗಿದ್ದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ನನ್ನ ದಾಖಲೆಯಾಗಿರುತ್ತದೆ ಎಂದರೆ ಸರಿ. ಆ ದಾಖಲೆಯಲ್ಲಿ ಮೊಹಿದ್ದೀನ್ ಷರೀಫ್ ಸ್ಟ್ರೀಟ್, ಕೆನರಾ ಬ್ಯಾಂಕ್ ರಸ್ತೆ, ಚಿಕ್ಕಮಗಳೂರು ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಮತ್ತೊಂದು ದಾಖಲೆ ನನ್ನದಲ್ಲ. 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.314/2015 ಅನ್ನು ಹಾಕಿದ್ದೆ ಎಂದರೆ ಸರಿ. ಆ ದಾವೆಯಲ್ಲಿ ಈಗ ನನಗೆ ತೋರಿಸುತ್ತಿರುವ ದಾಖಲೆಯನ್ನು ಹಾಜರುಪಡಿಸಿದ್ದೆ ಎಂದರೆ ಸರಿಯಲ್ಲ. ಓ.ಎಸ್.314/2015 ರಲ್ಲಿ ನಾನು ಹಾಜರುಪಡಿಸಿರುವ cumulative record ನಲ್ಲಿ ಎಷ್ಟು ಜನ ಸಹೋದರ ಸಹೋದರಿಯರು ಇದ್ದರು ಎಂದು ಹೇಳಿದ್ದೇನೆ ಎಂದರೆ, ನನಗೆ ಗೊತ್ತಿಲ್ಲ. 1 ನೇ ಆರೋಪಿ ನನ್ನ ಅಕ್ಕ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಭಾವ ಎಂದರೆ ಸರಿಯಲ್ಲ. 3 ನೇ ಆರೋಪಿ ನನ್ನ ಅಣ್ಣ ಎಂದರೆ ಸರಿಯಲ್ಲ.

ನನ್ನ ತಂದೆಯ ಹೆಸರು ಮೊಹಿದ್ದೀನ್ ಷರೀಫ್ ಅಲಿಯಾಸ್ ಛೋಟಾಸಾಬ್ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಅಬ್ದುಲ್ ರಶೀದ್. ನನ್ನ ತಾಯಿಯ ಹೆಸರು ಪ್ಯಾರಿಜಾನ್ ಎಂದರೆ ಸರಿಯಲ್ಲ. ನನ್ನ ಹೆಸರು ಸಜೀಲಾ ಯಾನೆ ಆಲ್ಮಾಸ್ ಎಂದರೆ

ಸರಿಯಲ್ಲ. ನನ್ನ ಹೆಸರು ಸಜೀಲಾ. ನಾನು ಹಾಕಿರುವ ದಾವೆಯಲ್ಲಿ ತಕರಾರು ಸಲ್ಲಿಸಿದ್ದು ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಆ ದಾವೆಯಲ್ಲಿ ಅಲೀಮುಲ್ಲಾ ಷರೀಫ್ ರವರ ವಿಚಾರಣೆಯಾಗಿದೆ, ಆದರೆ ಆತ ನನ್ನ ಅಣ್ಣ ಅಲ್ಲ. 3ನೇ ಆರೋಪಿಯೇ ನನ್ನ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಪತ್ರಿಕೆಯಲ್ಲಿ ನನ್ನ ತಂದೆ ತಾಯಿ ಮತ್ತು ನನ್ನ ಅಣ್ಣನ ಹೆಸರು ಇದೆ ಎಂದರೆ ಗೊತ್ತಿಲ್ಲ. ನಮ್ಮ ತಂದೆ ತಾಯಿ ಹೆಸರಿರುವ ರೇಷನ್ ಕಾರ್ಡ್ ಹಾಜರುಪಡಿಸಬಹುದು ಎಂದರೆ, ಆ ರೇಷನ್ ಕಾರ್ಡ್ ಇರುವುದಿಲ್ಲ, ನನ್ನ ಗುರುತಿನ ಚೀಟಿಯಲ್ಲಿ ನನ್ನ ತಂದೆಯ ಹೆಸರು ಇರುವುದಿಲ್ಲ, ನನ್ನ ಗಂಡನ ಹೆಸರು ಇರುತ್ತದೆ. ನನ್ನ ತಂದೆ ತಾಯಿಯ ಫೋಟೋಗಳು ಇರುವುದಿಲ್ಲ. ನಮ್ಮ ಧರ್ಮದಲ್ಲಿ ಸತ್ತುಹೋದವರ ಹೆಸರುಗಳು ಮಸೀದಿಯಲ್ಲಿ ನಮೂದಾಗುತ್ತವೆ ಎಂದರೆ ಸರಿ. ಸ್ಮಶಾನಕ್ಕೆ ಎಲ್ಲಿ ಜಾಗ ಕೊಟ್ಟಿರುತ್ತಾನೆ ಎಂಬುದನ್ನು ನಮೂದು ಮಾಡಿರುತ್ತಾರೆ ಎಂದರೆ, ನನಗೆ ಗೊತ್ತಿಲ್ಲ. ನಮ್ಮ ತಂದೆ ತಾಯಿ ಆದಿಶಕ್ತಿ ನಗರದ ಗವನಹಳ್ಳಿಯಲ್ಲಿ ಮೃತಪಟ್ಟಿರುತ್ತಾರೆ. ರಾಜಣ್ಣ ಎನ್ನುವವರ ಮನೆಯಲ್ಲಿ ಮೃತಪಟ್ಟಿದ್ದರು. ಮೊದಲು ನಮ್ಮ ತಂದೆ ಮೃತಪಟ್ಟಿದ್ದರು. ಆದಿಶಕ್ತಿ ನಗರದಲ್ಲಿ ನಮ್ಮ ತಂದೆ ತಾಯಿಯನ್ನು ದಫನ್ ಮಾಡಿದ್ದರು. ನಮ್ಮ ತಂದೆ ತಾಯಿಯನ್ನು ಎಲ್ಲಿ ದಫನ್ ಮಾಡಿರುತ್ತಾರೆ ಎಂದು ಮಸೀದಿಯಲ್ಲಿ ನಮೂದು ಮಾಡಿರುತ್ತಾರೆ ಆ ದಾಖಲೆಯನ್ನು ಹಾಜರುಪಡಿಸಬಹುದು ಎಂದರೆ, ಸಾಧ್ಯವಿಲ್ಲ, ಈಗ ನಾನು ಪಡಿತರ ಚೀಟಿಯನ್ನು ಪಡೆದುಕೊಂಡಿರುವುದಿಲ್ಲ. ನನ್ನ ಹುಟ್ಟಿದ ದಿಃ14-07-1973. ನಿಪಿ-4 ಮತ್ತು 5 ರಂತೆ ಇರುವ ಮರಣ ಪ್ರಮಾಣಪತ್ರಗಳನ್ನು ಲೋಕ್ ಅದಾಲತ್ ನಲ್ಲಿ ಅರ್ಜಿ ಹಾಕಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ-4 ಮತ್ತು 5 ಗಳನ್ನು ಸುಳ್ಳು ಮಾಹಿತಿ ಕೊಟ್ಟು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.